# ಕರ್ನಾಟಕ ಸರ್ಕಾರ

(ಕೃಷಿ ಇಲಾಖೆ)

ಸಂ: ಉಕೃನಿ/ಕೃಭಾ/ಸುತ್ತೋಲೆ/2014-15

ಕೃಷಿ ನಿರ್ದೇಶನಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು-01
ದಿನಾಂಕ: 12-01-2015.

## ಸುತ್ತೋಲೆ-9

ವಿಷಯ:- ಕೃಷಿ ಭಾಗ್ಯ ಯೋಜನೆಯಡಿ ವಿವಿಧ ಘಟಕಗಳಿಗೆ ಸಹಾಯಧನವನ್ನು ನೀಡಲು, ಇತರೆ ಯೋಜನೆಗಳಲ್ಲಿ ಇದೇ ಘಟಕಗಳಿಗೆ ನೀಡುವ ಸಹಾಯಧನವನ್ನೇ ಅನುಸರಿಸುವ ಬಗ್ಗೆ,

ಉಲ್ಲೇಖ:- 1. ದಿನಾಂಕ 01-01-2015ರಂದು ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕೃಷಿ ಭಾಗ್ಯ ಯೋಜನೆಯ ಕಾರ್ಯ ನಿರ್ವಹಣಾ ಸಮಿತಿ ಸಭೆಯಲ್ಲಿ ಚರ್ಚಿಸಿದಂತೆ.

2. ಸರ್ಕಾರದ ಆದೇಶ ಸಂ: ಕೃಇ 08 ಕೃಯೋಕಾ 2014, ದಿ: 22-07-2014

3. ಇದೇ ಸಮಸಂಖ್ಯೆಯ ಕೃಷಿ ಭಾಗ್ಯ ಯೋಜನೆಯ ಸುತ್ತೋಲೆಗಳು

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ-2ರ ಸರ್ಕಾರಿ ಆದೇಶದಲ್ಲಿ ಕೃಷಿ ಭಾಗ್ಯ ಯೋಜನೆಯಡಿ ಅನುಷ್ಠಾನಗೊಳಿಸುವ ವಿವಿಧ ಘಟಕಗಳಿಗೆ, ಸಾಮಾನ್ಯ ರೈತರಿಗೆ ಶೇ. 80 ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದ ರೈತರಿಗೆ ಶೇಕಡ 90 ಸಹಾಯಧನ ನೀಡಿ ಅನುಷ್ಠಾನಗೊಳಿಸಲು ತಿಳಿಸಲಾಗಿದೆ. ಅದರಂತೆ ಕೃಷಿ ಭಾಗ್ಯ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ ಸುತ್ತೋಲೆಗಳನ್ನು ಇಲಾಖೆಯಿಂದ ಹೊರಡಿಸಲಾಗಿದೆ.

ಮುಂದುವರೆದು, ರೈತರಿಗೆ ಆಯಾ ಇಲಾಖೆಗಳ ಚಾಲ್ತಿ ಯೋಜನೆಗಳಡಿ ಕೃಷಿ ಭಾಗ್ಯ ಯೋಜನೆಯ ಪ್ಯಾಕೇಜ್‌ನ ಕೆಲವು ಘಟಕಗಳಿಗೆ ಪ್ರತ್ಯೇಕವಾಗಿ ಸಹಾಯಧನವನ್ನು ನೀಡಲಾಗುತ್ತಿದೆ. ಈ ರೀತಿ ಸಹಾಯಧನವನ್ನು ಪಡೆದ ರೈತರಿಗೂ ಕೃಷಿ ಭಾಗ್ಯ ಯೋಜನೆಯ ಪ್ಯಾಕೇಜ್‌ನ ಇತರೆ ಘಟಕಗಳ ಸವಲತ್ತನ್ನು ನೀಡಿ ಒಟ್ಟಾರೆಯಾಗಿ ಕೃಷಿ ಭಾಗ್ಯ ಯೋಜನೆಯ ತಾಂತ್ರಿಕತೆಯನ್ನು ಹೆಚ್ಚು ಹೆಚ್ಚು ರೈತರಿಗೆ ನೀಡಲು ತೀರ್ಮಾನಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪ್ಯಾಕೇಜ್ ಸಹಾಯಧನ ನೀಡದೇ ಘಟಕವಾರು ಸಹಾಯಧನ ನೀಡಲು ದಿನಾಂಕ: 01-01-2015 ರಂದು ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕೃಷಿ ಭಾಗ್ಯ ಯೋಜನೆಯ ಕಾರ್ಯ ನಿರ್ವಹಣಾ ಸಮಿತಿ ಸಭೆಯಲ್ಲಿ ನಿರ್ಧರಿಸಲಾಗಿದೆ. ಕೃಷಿ ಭಾಗ್ಯ ಯೋಜನೆಯಡಿ ಅನುಷ್ಠಾನಗೊಳಿಸುವ ಘಟಕಗಳಿಗೆ ನೀಡಲಾಗುವ ಸಹಾಯಧನವನ್ನು ವಿವಿಧ ಇಲಾಖೆಗಳ ಬೇರೆ ಬೇರೆ ಯೋಜನೆಗಳಡಿ ಇದೇ ಘಟಕಗಳಿಗೆ ನೀಡಲಾಗುವ ಸಹಾಯಧನ ಪ್ರಮಾಣವನ್ನೇ ಅನುಸರಿಸಲು ಸೂಚಿಸಲಾಗಿದ್ದು, ಅದರಂತೆ ಕೃಷಿ ಭಾಗ್ಯ ಯೋಜನೆಯಡಿ ರೈತರಿಗೆ ನೀಡಬಹುದಾದ ಘಟಕವಾರು ಸಹಾಯಧನವನ್ನು ಅನುಬಂಧದಲ್ಲಿ ನೀಡಿರುವಂತೆ ನೀಡಲು ಸೂಚಿಸಿದೆ.

12.1.15.
ಕೃಷಿ ಆಯುಕ್ತರು

ಪ್ರತಿಯನ್ನು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು(23 ಜಿಲ್ಲೆಗಳು) ಇವರಿಗೆ ಮುಂದಿನ ಕ್ರಮಕ್ಕಾಗಿ

<u>ಅನುಬಂಧ</u>

| ಕ್ರಮ ಸಂಖ್ಯೆ | ಘಟಕ | ಸಹಾಯಧನ (ಶೇ) | |
|---|---|---|---|
| | | ಸಾಮಾನ್ಯ | ಪರಿಶಿಷ್ಟ ಜಾತಿ/ಪಂಗಡ |
| 1 | ನೀರು ಸಂಗ್ರಹಣಾ ರಚನೆಗಳು (ಪಾಲಿಥೀನ್ ಹೊದಿಕೆ ಸಹಿತ) | 80 | 90 |
| 2 | ನೀರು ಎತ್ತಲು ಡೀಸೆಲ್ ಪಂಪ್ ಸೆಟ್ | 50 | 90 |
| | ಸೋಲಾರ್ ಪಂಪ್‌ಸೆಟ್ | 50 | 50 |
| 3 | ನೀರು ಹಾಯಿಸಲು ಲಘು ನೀರಾವರಿ ಘಟಕ | 90 | 90 |
| 4 | ಬೆಳೆ ಪದ್ಧತಿ | | |
| | ಕೃಷಿ ಬೆಳೆಗಳಿಗೆ : ರಾಷ್ಟ್ರೀಯ ಆಹಾರ ಭದ್ರತಾ ಮಿಷನ್ ಯೋಜನೆ ಮಾರ್ಗಸೂಚನೆಯಂತೆ ಪ್ರತಿ ಹೆಕ್ಟೇರ್ ಗೆ ಗರಿಷ್ಠ ರೂ. 5000/- | | |

(ಕರಡು ಕೃಷಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ಕೃಷಿ ಆಯುಕ್ತರ ಪರವಾಗಿ